Re. No. D. 221

This contains the Kannada text of 2 Acts

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )


भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. २ | नई दिल्ली, गुरुवार, दिसम्बर ३१, २००९ | पुष्या १०, १९३१ (शका) | खंड. ४२ |
| No. 2 | New Delhi, Thursday, December 31, 2009 | Pushya 10, 1931 (Saka) | Vol. 42 |
| ಸಂ. ೨ | ನವ ದೆಹಲಿ, ಗುರುವಾರ, ಡಿಸೆಂಬರ್ ೩೧, ೨೦೦೯ | ಪುಷ್ಯ ೧೦, ೧೯೩೧ (ಶಕ) | ಸಂಪುಟ. ೪೨ |


**Ministry of Law and Justice**

(Legislative Department)

New Delhi, 31st December, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 31ನೇ ಡಿಸೆಂಬರ್, 2009**

The Translation in Kannada of the following Acts, namely :- (1) The National Institute of Pharmaceutical Education and Research Act, 1998, & (2) The Central Road Fund Act, 2000 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಅಧಿನಿಯಮ, 1998 ಹಾಗೂ (2) ಕೇಂದ್ರ ರಸ್ತೆ ನಿಧಿ ಅಧಿನಿಯಮ, 2000 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಅಧಿನಿಯಮ, 1998

## (1998ರ ಅಧಿನಿಯಮ ಸಂಖ್ಯೆ 13)

[ಜೂನ್ 26, 1998]

ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಎಂಬ ಹೆಸರಿನ ಸಂಸ್ಥೆಯನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆಯೆಂದು ಘೋಷಿಸುವುದಕ್ಕಾಗಿ ಮತ್ತು ಅದನ್ನು ನಿಗಮನಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೊಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆ ಎಂದು ಘೋಷಿಸುವುದು.–** ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಸೆಕ್ಟರ್–67, ಎಸ್.ಎ.ಎಸ್. ನಗರ (ಮೊಹಾಲಿ), ಜಿಲ್ಲೆ ರೋಪಾರ್, ಪಂಜಾಬ್ ಎಂಬ ಹೆಸರಿನ ಸಂಸ್ಥೆಯ ಉದ್ದೇಶಗಳು ರಾಷ್ಟ್ರೀಯ ಮಹತ್ವದ ಸಂಸ್ಥೆಯನ್ನಾಗಿ ಮಾಡುವಂಥವುಗಳಾಗಿರುವುದರಿಂದ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ಒಂದು ರಾಷ್ಟ್ರೀಯ ಮಹತ್ವದ ಸಂಸ್ಥೆ ಎಂದು ಈ ಮೂಲಕ ಘೋಷಿಸಲಾಗಿದೆ.

3. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೊತ್ತುಪಡಿಸಿದ ದಿನ" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸ್ಥಾಪನೆಯ ದಿನಾಂಕ ಎಂದು ಅರ್ಥ;

(ಬಿ) "ಮಂಡಳಿ" ಎಂದರೆ 4ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಸಂಸ್ಥೆಯ ಆಡಳಿತ ಮಂಡಳಿ ಎಂದು ಅರ್ಥ;

(ಸಿ) "ಅಧ್ಯಕ್ಷ" ಎಂದರೆ 4ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸಂಸ್ಥೆಯ ಅಧ್ಯಕ್ಷ ಎಂದು ಅರ್ಥ;

(ಡಿ) "ಡೀನ್" ಎಂದರೆ 17ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಂಸ್ಥೆಯ ಡೀನ್ ಎಂದು ಅರ್ಥ;

(ಇ) "ನಿರ್ದೇಶಕ" ಎಂದರೆ 16ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಂಸ್ಥೆಯ ನಿರ್ದೇಶಕ ಎಂದು ಅರ್ಥ;

(ಎಫ್) "ನಿಧಿ" ಎಂದರೆ 21ನೇ ಪ್ರಕರಣದ ಮೇರೆಗೆ ನಿರ್ವಹಿಸಲಾಗುವ ಸಂಸ್ಥೆಯ ನಿಧಿ ಎಂದು ಅರ್ಥ;

(ಜಿ) "ಸಂಸ್ಥೆ' ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2ಎ) ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಎಂದು ಅರ್ಥ;

(ಹೆಚ್) "ಸೆನೆಟ್" ಎಂದರೆ 13ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಂಸ್ಥೆಯ ಸೆನೆಟ್;

(ಐ) "ಸೊಸೈಟಿ" ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ 21) ಮೇರೆಗೆ ನೋಂದಣಿಯಾದ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸೊಸೈಟಿ ಸಂಸ್ಥೆ, ಸೆಕ್ಟರ್ 67, ಎಸ್.ಎ.ಎಸ್ ನಗರ (ಮೊಹಾಲಿ), ಜಿಲ್ಲೆ ರೋಪಾರ್, ಪಂಜಾಬ್ ಎಂದು ಅರ್ಥ;

(ಜೆ) "ಶಾಸನಗಳು" ಮತ್ತು "ಅಧ್ಯಾದೇಶಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ಸಂಸ್ಥೆಯ ಶಾಸನಗಳು ಮತ್ತು ಅಧ್ಯಾದೇಶಗಳು ಎಂದು ಅರ್ಥ.

## ಅಧ್ಯಾಯ – II
## ಸಂಸ್ಥೆ

4. **ಸಂಸ್ಥೆಯ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವನ್ನಾಗಿ ರಚಿಸತಕ್ಕದ್ದು.

(2) ಸಂಸ್ಥೆಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಆಸ್ತಿಯನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಹಾಗೂ ಕರಾರನ್ನು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ಅದು ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(2ಎ) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಇಂಥವೇ ಸಂಸ್ಥೆಗಳನ್ನು ದೇಶದ ಬೇರೆಬೇರೆ ಭಾಗಗಳಲ್ಲಿ ಸ್ಥಾಪಿಸಬಹುದು.

(3) ಸಂಸ್ಥೆಯು, ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡಿರುವ ಆಡಳಿತ ಮಂಡಳಿಯನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಅಧ್ಯಕ್ಷ, ಅವನು ಖ್ಯಾತ ಶಿಕ್ಷಣತಜ್ಞ, ವಿಜ್ಞಾನಿ ಅಥವಾ ತಂತ್ರಜ್ಞಾನಿ ಅಥವಾ ವೃತ್ತಿಪರನಾಗಿರತಕ್ಕದ್ದು, ಕುಲಾಧ್ಯಕ್ಷರ ಮೂಲಕ ನಾಮನಿರ್ದೇಶಿತನಾಗಬೇಕು;

(ಬಿ) ಸಂಸ್ಥೆಯ ನಿರ್ದೇಶಕ, **ಪದನಿಮಿತ್ತ;**

(ಸಿ) ಭಾರತ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯದಲ್ಲಿ ಅಥವಾ ಇಲಾಖೆಯಲ್ಲಿ ಔಷಧ ತಯಾರಿಕಾ ಕೈಗಾರಿಕೆಗಳ ಪ್ರಭಾರ ಹೊಂದಿರುವ ಜಂಟಿ ಕಾರ್ಯದರ್ಶಿ, **ಪದನಿಮಿತ್ತ;**

(ಡಿ) ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಸಂಸ್ಥೆಯು ಇರುವ ರಾಜ್ಯದ ಸರ್ಕಾರ, **ಪದನಿಮಿತ್ತ;**

(ಇ) ಔಷಧ ತಯಾರಿಕಾ ಕೈಗಾರಿಕೆಗಳೊಂದಿಗೆ ವ್ಯವಹರಿಸುತ್ತಿರುವ ಮಂತ್ರಾಲಯದ ಅಥವಾ ಭಾರತ ಸರ್ಕಾರದ ಇಲಾಖೆಯ ಆರ್ಥಿಕ ಸಲಹೆಗಾರ, **ಪದನಿಮಿತ್ತ;**

(ಎಫ್) ಭಾರತದ ಔಷಧ ಮಹಾನಿಯಂತ್ರಕ, ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, **ಪದನಿಮಿತ್ತ;**

(ಜಿ) ಸದಸ್ಯ ಕಾರ್ಯದರ್ಶಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು, **ಪದನಿಮಿತ್ತ;**

(ಹೆಚ್) ಮಹಾನಿರ್ದೇಶಕ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು, ನವ ದೆಹಲಿ, ಇವನಿಂದ ನಾಮನಿರ್ದೇಶಿತನಾಗುವ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ ಯಾವುದೇ ಒಂದು ರಾಷ್ಟ್ರೀಯ ಪ್ರಯೋಗಾಲಯದ ನಿರ್ದೇಶಕ;

(ಐ) ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ಸರದಿಯಂತೆ ನಾಮನಿರ್ದೇಶಿತನಾಗುವ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ನವ ದೆಹಲಿ, ಇದರ ಅಥವಾ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಯ ಸ್ನಾತಕೋತ್ತರ ಸಂಸ್ಥೆ, ಚಂಡಿಗಢ ಇದರ ನಿರ್ದೇಶಕ;

(ಜೆ) ಅಧ್ಯಕ್ಷ, ಭಾರತೀಯ ಔಷಧಗಳ ತಯಾರಕರ ಸಂಘ, **ಪದನಿಮಿತ್ತ;**

(ಜೆಎ) ಭಾರತ ಔಷಧ ಪರಿಷತ್ತಿನ ಪ್ರತಿನಿಧಿ;

(ಕೆ) ಅಧ್ಯಕ್ಷ, ಭಾರತ ಔಷಧ ಉತ್ಪಾದಕರ ಸಂಘ, **ಪದನಿಮಿತ್ತ;**

(ಎಲ್) ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತರಾಗುವ ಮೂವರು ಖ್ಯಾತ ಔಷಧ ತಯಾರಿಕಾ ತಜ್ಞರು, ಇವರಲ್ಲಿ ಒಬ್ಬ ಶಿಕ್ಷಣ ತಜ್ಞ, ಒಬ್ಬ ಸಂಶೋಧನ ವಿಜ್ಞಾನಿ ಮತ್ತು ಒಬ್ಬ ಜೈವಿಕ ತಂತ್ರಜ್ಞಾನಿಯಾಗಿರತಕ್ಕದ್ದು;

(ಎಂ) ಕೇಂದ್ರ ಸರ್ಕಾರವು ಸಿದ್ಧಪಡಿಸಿದ ಪಟ್ಟಿಯ ಪೈಕಿ ಕುಲಾಧ್ಯಕ್ಷನಿಂದ ನಾಮನಿರ್ದೇಶಿತರಾಗುವ ಮೂವರು ಸಾರ್ವಜನಿಕ ಖ್ಯಾತ ವ್ಯಕ್ತಿಗಳು ಅಥವಾ ಸಾಮಾಜಿಕ ಕಾರ್ಯಕರ್ತರು – ಇವರಲ್ಲಿ ಒಬ್ಬರು ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವನಾಗಿರತಕ್ಕದ್ದು;

(ಎನ್) ಕೇಂದ್ರ ಸರ್ಕಾರವು ಸಿದ್ಧಪಡಿಸಿದ ಪಟ್ಟಿಯ ಪೈಕಿ ಕುಲಾಧ್ಯಕ್ಷನಿಂದ ನಾಮನಿರ್ದೇಶಿತರಾಗುವ ಇಬ್ಬರು ಔಷಧ ತಯಾರಿಕಾ ಉದ್ಯಮಿಗಳು;

(ಓ) ಮೂವರು ಸಂಸತ್ ಸದಸ್ಯರು, ಲೋಕಸಭಾಧ್ಯಕ್ಷನಿಂದ ನಾಮನಿರ್ದೇಶಿತರಾಗಬೇಕಾದ ಇಬ್ಬರು ಲೋಕಸಭಾ ಸದಸ್ಯರು ಮತ್ತು ರಾಜ್ಯಸಭೆಯ ಸಭಾಪತಿಯಿಂದ ನಾಮನಿರ್ದೇಶಿತನಾಗಬೇಕಾದ ಒಬ್ಬ ರಾಜ್ಯಸಭಾ ಸದಸ್ಯ.

(4) ಆಡಳಿತ ಮಂಡಳಿಯ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಅಧ್ಯಕ್ಷನ ಮತ್ತು ಆಡಳಿತ ಮಂಡಳಿಯ ಸದಸ್ಯರುಗಳ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವರು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, (3)ನೇ ಉಪಪ್ರಕರಣದ (ಒ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸದಸ್ಯನ ಪದಾವಧಿಯು, ಅವನು ಮಂತ್ರಿ ಅಥವಾ ರಾಜ್ಯ ಮಂತ್ರಿ ಅಥವಾ ಉಪಮಂತ್ರಿ ಅಥವಾ ಲೋಕಸಭೆಯ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅಥವಾ ರಾಜ್ಯ ಸಭೆಯ ಉಪಸಭಾಪತಿಯಾಗಿ ಪದಧಾರಣ ಮಾಡಿದ ಕೂಡಲೇ ಅಥವಾ ಯಾವ ಸದನದಿಂದ ಅವನು ಸದಸ್ಯನಾಗಿ ನಾಮನಿರ್ದೇಶಿತನಾಗಿದ್ದನೋ ಆ ಸದನದ ಸದಸ್ಯತ್ವ ನಿಂತುಹೋದಾಗ ಕೊನೆಗೊಳ್ಳತಕ್ಕದ್ದು.

(5) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬಲು ನಾಮನಿರ್ದೇಶಿತನಾದ ಆಡಳಿತ ಮಂಡಳಿಯ ಸದಸ್ಯನ ಪದಾವಧಿಯು ಯಾರ ಸ್ಥಾನದಲ್ಲಿ ಅವನನ್ನು ನಾಮನಿರ್ದೇಶಿಸಲಾಗಿದೆಯೋ ಆ ಸದಸ್ಯನ ಉಳಿದ ಅವಧಿಯವರೆಗೆ ಮುಂದುವರಿಯತಕ್ಕದ್ದು.

(6) ಮಂಡಳಿಯು ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಮತ್ತು ಸಮಯದಲ್ಲಿ ಕನಿಷ್ಠಪಕ್ಷ ವರ್ಷದಲ್ಲಿ ಮೂರು ಬಾರಿಯಾದರೂ ಮಂಡಳಿಯು ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**4ಎ. ಸಂಸ್ಥೆಯ ಕೇಂದ್ರಗಳು.**– ಸಂಸ್ಥೆಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತನ್ನ ಅಧಿಕಾರವ್ಯಾಪ್ತಿಯೊಳಗೆ ಇರುವ ಬೇರೆಬೇರೆ ಸ್ಥಳಗಳಲ್ಲಿ ಒಂದು ಅಥವಾ ಹೆಚ್ಚು ಕೇಂದ್ರಗಳನ್ನು ಸ್ಥಾಪಿಸಬಹುದು.

**5. ಸ್ವತ್ತುಗಳನ್ನು ನಿಹಿತಗೊಳಿಸುವುದು.–** ಗೊತ್ತುಪಡಿಸಿದ ದಿನದಂದು ಮತ್ತು ಆ ದಿನದಿಂದ, ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ನಿಕಟಪೂರ್ವದಲ್ಲಿ ಸೊಸೈಟಿಯಲ್ಲಿ ನಿಹಿತವಾಗಿದ್ದ ಎಲ್ಲಾ ಸ್ವತ್ತುಗಳು ಅಂಥ ಪ್ರಾರಂಭದಂದು ಮತ್ತು ಪ್ರಾರಂಭದಿಂದ ಸಂಸ್ಥೆಯಲ್ಲಿ ನಿಹಿತಗೊಳ್ಳತಕ್ಕದ್ದು.

**6. ಸಂಸ್ಥೆಯನ್ನು ನಿಗಮಿತಗೊಳಿಸಿದುದರ ಪರಿಣಾಮ.–** ಗೊತ್ತುಪಡಿಸಿದ ದಿನದಂದು ಮತ್ತು ಆ ದಿನದಿಂದ,–

(ಎ) ಯಾವುದೇ ಕರಾರಿನಲ್ಲಿ ಮತ್ತು ಇತರ ಲಿಖಿತದಲ್ಲಿ ಸೊಸೈಟಿಗೆ ಸಂಬಂಧಿಸಿದ ಯಾವುದೇ ಉಲ್ಲೇಖವನ್ನು ಸಂಸ್ಥೆಗೆ ಸಂಬಂಧಿಸಿದ ಉಲ್ಲೇಖವೆಂದು ಭಾವಿಸತಕ್ಕದ್ದು;

(ಬಿ) ಸೊಸೈಟಿಯ ಎಲ್ಲಾ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸಂಸ್ಥೆಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅವು ಸಂಸ್ಥೆಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಆಗಿರತಕ್ಕದ್ದು; ಮತ್ತು

(ಸಿ) ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಸೊಸೈಟಿಯು ನಿಯೋಜಿಸಿದ್ದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮವು ಅಂಗೀಕಾರವಾಗಿರದಿದ್ದರೆ ಹೇಗೋ ಹಾಗೆ ಅದೇ ಅವಧಿಯವರೆಗೆ, ಅದೇ ಪರಿಶ್ರಮಧನದ ಮೇಲೆ ಮತ್ತು ಅದೇ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ನಿವೃತ್ತಿ ವೇತನ, ರಜೆ, ಉಪದಾನ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿ ಅವನು ಹೊಂದಿರಬಹುದಾಗಿದ್ದಂಥ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಸಂಸ್ಥೆಯಲ್ಲಿ ಪದವನ್ನು ಅಥವಾ ಸೇವೆಯನ್ನು ಧಾರಣ ಮಾಡಿರತಕ್ಕದ್ದು ಮತ್ತು ಅವನ ನೇಮಕವನ್ನು ಕೊನೆಗೊಳಿಸದ ಹೊರತು ಮತ್ತು ಕೊನೆಗೊಳಿಸುವವರೆಗೆ ಅಥವಾ ಅಂಥ ಪದಾವಧಿಯನ್ನು, ಪರಿಶ್ರಮಧನವನ್ನು ಮತ್ತು ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಶಾಸನಗಳ ಮೂಲಕ ಯುಕ್ತವಾಗಿ ಬದಲಾಯಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು:

ಪರಂತು, ಹಾಗೆ ಮಾಡಲಾದ ಬದಲಾವಣೆಯು ಅಂಥ ನೌಕರನಿಗೆ ಅಂಗೀಕಾರಾರ್ಹವಾಗದಿದ್ದರೆ, ನೌಕರನೊಂದಿಗೆ ಮಾಡಿಕೊಂಡ ಕರಾರಿನ ನಿಬಂಧನೆಗಳಿಗನುಸಾರವಾಗಿ ಅಥವಾ ಈ ಬಗ್ಗೆ ಅದರಲ್ಲಿ ಯಾವುದೇ ಉಪಬಂಧ ಮಾಡಿರದಿದ್ದರೆ, ಖಾಯಂ ನೌಕರನ ಸಂದರ್ಭದಲ್ಲಿ ಮೂರು ತಿಂಗಳ ಸಂಭಾವನೆಗೆ ಮತ್ತು ಇತರ ನೌಕರನ ಸಂದರ್ಭದಲ್ಲಿ ಒಂದು ತಿಂಗಳ ಸಂಭಾವನೆಗೆ ಸಮನಾದ ನಷ್ಟ ಪರಿಹಾರವನ್ನು ಸಂಸ್ಥೆಯು ಅವನಿಗೆ ಸಂದಾಯ ಮಾಡಿದ ಮೇಲೆ ಸಂಸ್ಥೆಯು ಅವನ ನೇಮಕವನ್ನು ಕೊನೆಗೊಳಿಸತಕ್ಕದ್ದು.

**7. ಸಂಸ್ಥೆಯ ಪ್ರಕಾರ್ಯಗಳು.–** ಸಂಸ್ಥೆಯ ಪ್ರಕಾರ್ಯಗಳು ಈ ಮುಂದಿನವುಗಳಾಗಿರತಕ್ಕದ್ದು,–

(i) ಔಷಧೀಯ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಗುಣಮಟ್ಟವನ್ನು ಮತ್ತು ಶ್ರೇಷ್ಠತೆಯನ್ನು ಪಾಲಿಸಿಕೊಂಡು ಬರುವುದು ಮತ್ತು ವೃದ್ಧಿಗೊಳಿಸುವುದು;

(ii) ಔಷಧೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ, ಡಾಕ್ಟೊರಲ್ ಮತ್ತು ಸ್ನಾತಕೋತ್ತರ ಡಾಕ್ಟೊರಲ್ ವ್ಯಾಸಂಗ ಕ್ರಮಗಳಿಗೆ ಮತ್ತು ಸಂಶೋಧನೆಗೆ ಅನುವು ಮಾಡಿಕೊಡುವ ವ್ಯಾಸಂಗ ಕ್ರಮಗಳ ಮೇಲೆ ಗಮನ ಕೇಂದ್ರೀಕರಿಸುವುದು;

(iii) ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳನ್ನು ನೀಡುವುದು;

(iv) ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(v) ಪೂರ್ಣವಾಗಿ ಅಥವಾ ಭಾಗಶಃ ಒಂದೇ ಥರದ ಉದ್ದೇಶಗಳನ್ನು ಹೊಂದಿರುವ ಶೈಕ್ಷಣಿಕ ಅಥವಾ ಇತರ ಸಂಸ್ಥೆಗಳೊಡನೆ ಸಂಸ್ಥೆಯು ವ್ಯಾಸಂಗ ವಿಭಾಗದ ಸದಸ್ಯರನ್ನು ಮತ್ತು ವಿದ್ವಾಂಸರನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಮತ್ತು ಸಾಮಾನ್ಯವಾಗಿ ಅವುಗಳ ಸಮಾನ ಉದ್ದೇಶಕ್ಕೆ ಸಹಾಯಕವಾಗಬಹುದಾದಂಥ ರೀತಿಯಲ್ಲಿ ಸಹಕರಿಸುವುದು;

(vi) ಬೋಧಕರಿಗೆ, ಔಷಧೀಯ ತಂತ್ರಜ್ಞರಿಗೆ, ಸಮುದಾಯ ಮತ್ತು ಆಸ್ಪತ್ರೆಯ ಔಷಧ ತಜ್ಞರಿಗೆ ಮತ್ತು ಇತರ ವೃತ್ತಿಪರರಿಗಾಗಿ ವ್ಯಾಸಂಗ ಕ್ರಮಗಳನ್ನು ನಡೆಸುವುದು;

(vii) ದೇಶದ ಒಳಗೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ಇತರೆ ಸಂಸ್ಥೆಗಳಿಗಾಗಿ ತನ್ನದೇ ಆದ ಮಾಹಿತಿ ಕೇಂದ್ರವನ್ನು ಅಭಿವೃದ್ಧಿಪಡಿಸುವುದಕ್ಕೆ ಔಷಧೀಯ ಮತ್ತು ಸಂಬಂಧಪಟ್ಟ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಜಾಗತಿಕ ಸಾಹಿತ್ಯವನ್ನು ಸಂಗ್ರಹಿಸುವುದು ಮತ್ತು ನಿರ್ವಹಿಸುವುದು;

(viii) ಸಂಸ್ಥೆಯ ಒಳಗೆ ಮತ್ತು ಹೊರಗೆ ಸಂಶೋಧಕರ ಉಪಯೋಗಕ್ಕಾಗಿ ಔಷಧೀಯ ಉಪಕರಣಗಳ ಅಭಿವೃದ್ಧಿ ಮತ್ತು ತಯಾರಿಕೆ ಮತ್ತು ವಿಶ್ಲೇಷಣೆಯ ಕೇಂದ್ರೀಯ ವ್ಯಾಸಂಗ ವಿಭಾಗವನ್ನು ತೆರೆಯುವುದು;

(ix) ಔಷಧೀಯ ಬೋಧನಾ ಕಲೆಯಲ್ಲಿ ಅಥವಾ ವಿಜ್ಞಾನದಲ್ಲಿ ಪ್ರಯೋಗಕ್ಕಾಗಿ ಮತ್ತು ಹೊಸ ಶೋಧನೆಗಾಗಿ ಮತ್ತು ಬೋಧಕರಿಗೆ ಹಾಗೂ ಇತರ ಕೆಲಸಗಾರರಿಗೆ ತರಬೇತಿ ನೀಡುವುದಕ್ಕಾಗಿ ಒಂದು ಕೇಂದ್ರವನ್ನು ಹೊಂದಿರುವುದು;

(x) ರಾಷ್ಟ್ರೀಯ, ಶೈಕ್ಷಣಿಕ, ವೃತ್ತೀಯ ಮತ್ತು ಕೈಗಾರಿಕಾ ಬದ್ಧತೆಗಳ ಮೇಲೆ ಒತ್ತುಕೊಟ್ಟು ಔಷಧೀಯ ಕ್ಷೇತ್ರಗಳಲ್ಲಿ ಲಭ್ಯವಿರುವ ಮಾಹಿತಿಯ ಪ್ರಸರಣಕ್ಕಾಗಿ ಮತ್ತು ಹೊಸ ಜ್ಞಾನವನ್ನು ಸೃಷ್ಟಿಸುವುದಕ್ಕಾಗಿ ಜಾಗತಿಕ ಮಟ್ಟದ ಕೇಂದ್ರವನ್ನು ಅಭಿವೃದ್ಧಿಪಡಿಸುವುದು;

(xi) ವೃತ್ತೀಯ, ವಿದ್ಯಾವಿಷಯಗಳ ಮತ್ತು ಔಷಧೀಯ ಉದ್ಯಮದ ವಿಸ್ತೃತ ಹಿತಾಸಕ್ತಿಗಳಿಗೆ ಉತ್ತಮ ಸೇವೆ ನೀಡುವಂತಾಗಲು ಮತ್ತು ಔಷಧೀಯ ಶಿಕ್ಷಣ ಮತ್ತು ಸಂಶೋಧನೆಯ ಬದಲಾಗುತ್ತಿರುವ ಜಾಗತಿಕ ಒಲವು ಮತ್ತು ರೀತಿಗಳಿಗೆ ಸರಿಹೊಂದುವಂತೆ ಔಷಧೀಯ ಕಾರ್ಯಸಂಸ್ಕೃತಿಯನ್ನು ಬೆಳೆಸಲು ಔಷಧೀಯ ಮಾನವ ಶಕ್ತಿ ಸಂಶೋಧನೆಯನ್ನು ಮತ್ತು ತರಬೇತಿಯನ್ನು ನಡೆಸಿಕೊಂಡು ಹೋಗಲು ಹಲವು ವಿಷಯಗಳ ಅಭ್ಯಾಸ ಕ್ರಮವನ್ನು ವೃದ್ಧಿಪಡಿಸುವುದು;

(xii) ಔಷಧೀಯ ಶಿಕ್ಷಣದ ಆಯ್ದ ಕ್ಷೇತ್ರಗಳಲ್ಲಿ ಕಾಲ ಕಾಲಕ್ಕೆ ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಉಪನ್ಯಾಸ ಮಾಲೆಗಳನ್ನು, ವಿಚಾರ ಗೋಷ್ಠಿಗಳನ್ನು ಮತ್ತು ಸಮ್ಮೇಳನಗಳನ್ನು ಆಯೋಜಿಸುವುದು;

(xiii) ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ವಿಶೇಷ ಅವಶ್ಯಕತೆಗಳನ್ನು ಪೂರೈಸಲು ವ್ಯಾಸಂಗಕ್ರಮಗಳನ್ನು ಏರ್ಪಡಿಸುವುದು;

(xiv) ಸಂಸ್ಥೆಯ ಮತ್ತು ಉದ್ಯಮದ ನಡುವೆ ವಿಜ್ಞಾನಿಗಳನ್ನು ಮತ್ತು ಇತರ ತಾಂತ್ರಿಕ ಸಿಬ್ಬಂದಿಯನ್ನು ವಿನಿಮಯ ಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸುವ ಮೂಲಕ ಮತ್ತು ಸಂಸ್ಥೆಯು ಪ್ರಾಯೋಜಿಸಿದ ಹಾಗೂ ಹಣ ಒದಗಿಸಿದ ಸಂಶೋಧನೆಯನ್ನು ಮತ್ತು ಸಲಹಾ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮೂಲಕ ವಿದ್ಯಾವಿಷಯಗಳ ಮತ್ತು ಉದ್ಯಮಗಳ ನಡುವೆ ಪರಸ್ಪರ ಸಮಾಲೋಚನೆಯ ಕೇಂದ್ರಬಿಂದುವಾಗಿ ಕಾರ್ಯನಿರ್ವಹಿಸುವುದು; ಮತ್ತು

(xv) ದೇಶದ ಸಾಮಾಜಿಕ-ಆರ್ಥಿಕ ಸ್ವರೂಪವನ್ನು ಗಮನಕ್ಕೆ ತೆಗೆದುಕೊಂಡು ಗ್ರಾಮೀಣ ಜನಸಮುದಾಯಗಳಿಗಾಗಿ ಇರುವ ಔಷಧಗಳ ಹಂಚಿಕೆ ಮತ್ತು ಬಳಕೆಯ ಮೇಲಿನ ಅಧ್ಯಯನಕ್ಕೆ ಸೂಕ್ತ ಗಮನ ಕೊಡುವುದು.

**8. ಮಂಡಳಿಯ ಅಧಿಕಾರಗಳು.**-(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಂಡಲಿಯು ಸಂಸ್ಥೆಯ ವ್ಯವಹಾರಗಳ ಸಾಮಾನ್ಯ ಮೇಲ್ವಿಚಾರಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರಿಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಶಾಸನಗಳ, ಮತ್ತು ಅಧ್ಯಾದೇಶಗಳ ಮೂಲಕ ಅನ್ಯಥಾ ಉಪಬಂಧಿಸಿಲ್ಲದ ಎಲ್ಲಾ ಅಧಿಕಾರಗಳನ್ನು ಅದು ಚಲಾಯಿಸತಕ್ಕದ್ದು ಮತ್ತು ಸೆನೆಟಿನ ಕಾರ್ಯಗಳನ್ನು ಪುನರವಲೋಕಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಮಂಡಳಿಯು,-

(ಎ) ಸಂಸ್ಥೆಯ ಆಡಳಿತ ಮತ್ತು ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ಕಾರ್ಯನೀತಿ ಪ್ರಶ್ನೆಗಳ ಮೇಲೆ ತೀರ್ಮಾನ ಕೈಗೊಳ್ಳತಕ್ಕದ್ದು;

(ಬಿ) ಫೀಜುಗಳನ್ನು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸತಕ್ಕದ್ದು, ಕೇಳತಕ್ಕದ್ದು ಮತ್ತು ಸ್ವೀಕರಿಸತಕ್ಕದ್ದು;

(ಸಿ) ಸಂಸ್ಥೆಯ ವಿದ್ಯಾರ್ಥಿಗಳ ವಾಸಸ್ಥಳದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ಅವರನ್ನು ಶಿಸ್ತಿಗೊಳಪಡಿಸುವುದು ಮತ್ತು ಅವರ ಆರೋಗ್ಯ, ಸಾಮಾನ್ಯ ಕಲ್ಯಾಣ ಮತ್ತು ಸಾಂಸ್ಕೃತಿಕ ಹಾಗೂ ಸಮುದಾಯ ಜೀವನವನ್ನು ವೃದ್ಧಿಗೊಳಿಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡತಕ್ಕದ್ದು;

(ಡಿ) ಶೈಕ್ಷಣಿಕ ಮತ್ತು ಇತರ ಹುದ್ದೆಗಳನ್ನು ಸ್ಥಾಪಿಸುವುದು ಮತ್ತು ಅವುಗಳಿಗೆ (ನಿರ್ದೇಶಕನ ಹುದ್ದೆಯನ್ನು ಹೊರತುಪಡಿಸಿ) ನೇಮಕಗಳನ್ನು ಮಾಡತಕ್ಕದ್ದು;

(ಇ) ಶಾಸನಗಳನ್ನು ಮತ್ತು ಅಧ್ಯಾದೇಶಗಳನ್ನು ರಚಿಸತಕ್ಕದ್ದು ಮತ್ತು ಅವುಗಳನ್ನು ಬದಲಾಯಿಸತಕ್ಕದ್ದು, ಮಾರ್ಪಾಟು ಮಾಡತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು;

(ಎಫ್) ಫೆಲೋಶಿಪ್, ಸ್ಕಾಲರ್‌ಶಿಪ್, ಪಾರಿತೋಷಕಗಳು ಮತ್ತು ಪದಕಗಳನ್ನು ಸ್ಥಾಪಿಸತಕ್ಕದ್ದು ಮತ್ತು ನೀಡತಕ್ಕದ್ದು;

(ಜಿ) ಸಂಸ್ಥೆಯ ಅಭಿವೃದ್ಧಿ ಯೋಜನೆಗಳ ವಿವರಪತ್ರದೊಂದಿಗೆ ತಾನು ಸೂಕ್ತವೆಂದು ಯೋಚಿಸಬಹುದಾದಂತೆ ಮುಂದಿನ ಆರ್ಥಿಕ ವರ್ಷಕ್ಕಾಗಿ ಸಂಸ್ಥೆಯ ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು ಆಯವ್ಯಯ ಅಂದಾಜುಗಳನ್ನು ಪರ್ಯಾಲೋಚಿಸಿ ನಿರ್ಣಯವನ್ನು ಅಂಗೀಕರಿಸತಕ್ಕದ್ದು;

(ಹೆಚ್) ಮೇಲೆ ಹೇಳಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ನಿರ್ವಹಿಸುವುದಕ್ಕೆ ಆವಶ್ಯಕವಾಗಬಹುದಾದ, ಆನುಷಂಗಿಕವಾಗಬಹುದಾದ ಅಥವಾ ಸಹಾಯಕವಾಗಬಹುದಾದ ಎಲ್ಲಾ ಕಾರ್ಯಗಳನ್ನು ಮಾಡತಕ್ಕದ್ದು.

(3) ಮಂಡಳಿಯು ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ತನ್ನ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಅವಶ್ಯಕವೆಂದು ಪರಿಗಣಿಸುವಂಥ ಸಮಿತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಮಂಡಳಿಯು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾವುದೇ ರೀತಿಯಲ್ಲಿ ಯಾವುದೇ ಸ್ಥಿರಾಸ್ತಿಯನ್ನು ವಿಲೆ ಮಾಡತಕ್ಕದ್ದಲ್ಲ.

**9. ಎಲ್ಲಾ ಜನಾಂಗಗಳಿಗೆ, ಪಂಥಗಳಿಗೆ ಮತ್ತು ವರ್ಗಗಳಿಗೆ ಸಂಸ್ಥೆಯು ಮುಕ್ತವಾಗಿರತಕ್ಕದ್ದು.**– (1) ಸಂಸ್ಥೆಯು, ಎಲ್ಲಾ ವ್ಯಕ್ತಿಗಳಿಗೂ ಲಿಂಗ ಭೇದವಿಲ್ಲದೆ ಮತ್ತು ಅವರು ಯಾವುದೇ ಜನಾಂಗಕ್ಕೆ, ಪಂಥಕ್ಕೆ, ಜಾತಿಗೆ ಅಥವಾ ವರ್ಗಕ್ಕೆ ಸೇರಿರಲಿ ಅವರಿಗೆ ಮುಕ್ತವಾಗಿರತಕ್ಕದ್ದು ಮತ್ತು ಸದಸ್ಯರಿಗೆ, ವಿದ್ಯಾರ್ಥಿಗಳಿಗೆ, ಬೋಧಕರಿಗೆ ಅಥವಾ ಕೆಲಸಗಾರರಿಗೆ ಪ್ರವೇಶ ನೀಡುವಲ್ಲಿ ಅಥವಾ ನೇಮಕ ಮಾಡುವಲ್ಲಿ ಅಥವಾ ಇತರ ಯಾವುದೇ ಸಂಬಂಧದಲ್ಲಿ ಧಾರ್ಮಿಕ ನಂಬಿಕೆಗೆ ಅಥವಾ ವೃತ್ತಿಗೆ ಸಂಬಂಧಿಸಿ ಯಾವುದೇ ಮಾನದಂಡವನ್ನು ಅಥವಾ ಷರತ್ತನ್ನು ವಿಧಿಸತಕ್ಕದ್ದಲ್ಲ.

(2) ಈ ಪ್ರಕರಣದ ಆಶಯಕ್ಕೆ ಮತ್ತು ಉದ್ದೇಶಕ್ಕೆ ವಿರುದ್ಧವಾದ ಷರತ್ತುಗಳು ಅಥವಾ ಬಾಧ್ಯತೆಗಳು ಒಳಗೊಂಡಿರುವುವೆಂದು ಮಂಡಳಿಯು ಅಭಿಪ್ರಾಯಪಟ್ಟಲ್ಲಿ, ಯಾವುದೇ ಸ್ವತ್ತಿನ ಮರಣಶಾಸನ ದಾನವನ್ನು, ದೇಣಿಗೆಯನ್ನು ಅಥವಾ ವರ್ಗಾವಣೆಗಳನ್ನು ಸಂಸ್ಥೆಯು ಸ್ವೀಕರಿಸತಕ್ಕದ್ದಲ್ಲ.

**10. ಸಂಸ್ಥೆಯಲ್ಲಿ ಬೋಧನೆ.**– ಸಂಸ್ಥೆಯಲ್ಲಿನ ಎಲ್ಲಾ ಬೋಧನೆಯು ಈ ಬಗ್ಗೆ ರಚಿಸಲಾದ ಶಾಸನಗಳಿಗೆ ಮತ್ತು ಅಧ್ಯಾದೇಶಗಳಿಗೆ ಅನುಸಾರವಾಗಿ ಸಂಸ್ಥೆಯ ಮೂಲಕ ಅಥವಾ ಸಂಸ್ಥೆಯ ಹೆಸರಿನಲ್ಲಿ ನಡೆಯತಕ್ಕದ್ದು.

**11. ಕುಲಾಧ್ಯಕ್ಷ.**– (1) ಭಾರತದ ರಾಷ್ಟ್ರಪತಿಯು ಸಂಸ್ಥೆಯ ಕುಲಾಧ್ಯಕ್ಷನಾಗಿರತಕ್ಕದ್ದು.

(2) ಕುಲಾಧ್ಯಕ್ಷನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಸಂಸ್ಥೆಯ ಕಾರ್ಯವನ್ನು ಹಾಗೂ ಪ್ರಗತಿಯನ್ನು ಪುನರಾವಲೋಕನ ಮಾಡಲು ಮತ್ತು ಅದರ ವ್ಯವಹಾರಗಳ ಬಗ್ಗೆ ವಿಚಾರಣೆಗಳನ್ನು ನಡೆಸಲು ಮತ್ತು ಆ ಬಗ್ಗೆ ವರದಿ ಸಲ್ಲಿಸಲು ಕುಲಾಧ್ಯಕ್ಷನು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡಬಹುದು.

(3) ಯಾವುದೇ ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಕುಲಾಧ್ಯಕ್ಷನು ಆ ವರದಿಯಲ್ಲಿ ಚರ್ಚಿಸಲಾದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಅವನು ಅವಶ್ಯಕವೆಂದು ಪರಿಗಣಿಸುವಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.

12. **ಸಂಸ್ಥೆಯ ಪ್ರಾಧಿಕಾರಗಳು.–** ಈ ಕೆಳಕಂಡವುಗಳು ಸಂಸ್ಥೆಯ ಇತರ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(ಎ) ಸೆನೆಟ್;

(ಬಿ) ಸಂಸ್ಥೆಯ ಪ್ರಾಧಿಕಾರಗಳೆಂದು ಶಾಸನಗಳ ಮೂಲಕ ಘೋಷಿಸಬಹುದಾದಂಥ ಇತರ ಪ್ರಾಧಿಕಾರಗಳು.

13. **ಸೆನೆಟ್.–** ಸಂಸ್ಥೆಯ ಸೆನೆಟ್ ಈ ಕೆಳಕಂಡ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ನಿರ್ದೇಶಕ, **ಪದನಿಮಿತ್ತ,** ಅವನು ಸೆನೆಟ್‌ನ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಡೀನ್, **ಪದನಿಮಿತ್ತ;**

(ಸಿ) ಅಧ್ಯಕ್ಷನು ನಿರ್ದೇಶಕನೊಂದಿಗೆ ಸಮಾಲೋಚಿಸಿ ಸರದಿಯ ಮೇಲೆ ನಾಮನಿರ್ದೇಶನ ಮಾಡಬೇಕಾದ ಸಂಸ್ಥೆಯ ಐವರು ಪ್ರಾಧ್ಯಾಪಕರು;

(ಡಿ) ಅಧ್ಯಕ್ಷನು ನಿರ್ದೇಶಕನೊಂದಿಗೆ ಸಮಾಲೋಚಿಸಿ ನಾಮನಿರ್ದೇಶನ ಮಾಡಬೇಕಾದ ಸಂಸ್ಥೆಯ ನೌಕರರಲ್ಲದ ಮೂವರು ವ್ಯಕ್ತಿಗಳು, ಅವರಲ್ಲಿ ವಿಜ್ಞಾನ, ಇಂಜಿನಿಯರಿಂಗ್ ಮತ್ತು ಮಾನವಿಕ ಶಾಸ್ತ್ರ ಕ್ಷೇತ್ರದ ಗಣ್ಯ ಶಿಕ್ಷಣ ತಜ್ಞರ ಪೈಕಿ ಒಬ್ಬೊಬ್ಬರು ಮತ್ತು ಅವರಲ್ಲಿ ಒಬ್ಬರು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು; ಮತ್ತು

(ಇ) ಶಾಸನಗಳಲ್ಲಿ ಹೇಳಬಹುದಾದಂಥ ಸಿಬ್ಬಂದಿಯ ಇತರ ಸದಸ್ಯರು.

14. **ಸೆನೆಟ್ಟಿನ ಪ್ರಕಾರ್ಯಗಳು.–** ಸಂಸ್ಥೆಯ ಸೆನೆಟ್ಟು, ಈ ಅಧಿನಿಯಮದ ಉಪಬಂಧಗಳಿಗೆ, ಶಾಸನಗಳಿಗೆ ಮತ್ತು ಅಧ್ಯಾದೇಶಗಳಿಗೆ ಒಳಪಟ್ಟು, ಸಂಸ್ಥೆಯ ನಿಯಂತ್ರಣ ಹಾಗೂ ಸಾಮಾನ್ಯ ಮೇಲ್ವಿಚಾರಣೆ ಹೊಂದಿರತಕ್ಕದ್ದು ಮತ್ತು ಸಂಸ್ಥೆಯಲ್ಲಿ ಬೋಧನೆಯ, ಶಿಕ್ಷಣದ ಮತ್ತು ಪರೀಕ್ಷೆಗಳ ಗುಣಮಟ್ಟಗಳನ್ನು ಕಾಪಾಡಲು ಜವಾಬ್ದಾರಿಯಾಗಿರತಕ್ಕದ್ದು ಮತ್ತು ಶಾಸನಗಳ ಮೂಲಕ ತನಗೆ ಪ್ರದತ್ತವಾಗಬಹುದಾದಂಥ ಅಥವಾ ವಿಧಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

15. **ಅಧ್ಯಕ್ಷನ ಪ್ರಕಾರ್ಯಗಳು, ಅಧಿಕಾರಗಳು ಹಾಗೂ ಕರ್ತವ್ಯಗಳು.–** (1) ಅಧ್ಯಕ್ಷನು ಸಾಮಾನ್ಯವಾಗಿ ಮಂಡಳಿಯ ಸಭೆಗಳಲ್ಲಿ ಮತ್ತು ಸಂಸ್ಥೆಯ ಪದವಿ ಪ್ರದಾನ ಸಮಾರಂಭಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(2) ಮಂಡಳಿಯು ತೆಗೆದುಕೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸಿದ ಬಗ್ಗೆ ಖಚಿತಪಡಿಸಿಕೊಳ್ಳುವುದು ಅಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

(3) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ಅಧ್ಯಕ್ಷನಿಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಆತನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

16. **ನಿರ್ದೇಶಕ.–** (1) ಮಂಡಳಿಯು, ಕುಲಾಧ್ಯಕ್ಷನ ಪೂರ್ವಾನುಮೋದನೆ ಪಡೆದು ಸಂಸ್ಥೆಯ ನಿರ್ದೇಶಕನನ್ನು ನೇಮಕ ಮಾಡತಕ್ಕದ್ದು.

(2) ನಿರ್ದೇಶಕನು ಸಂಸ್ಥೆಯ ಶೈಕ್ಷಣಿಕ ವಿಷಯಗಳ ಮುಖ್ಯಸ್ಥ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಸಂಸ್ಥೆಯ ಸಮರ್ಪಕ ಆಡಳಿತ ಮತ್ತು ಶೈಕ್ಷಣಿಕ ನಿರ್ವಹಣೆಗೆ ಮತ್ತು ಶಿಕ್ಷಣ ನೀಡುವುದಕ್ಕೆ ಮತ್ತು ಅದರಲ್ಲಿ ಶಿಸ್ತು ಪಾಲನೆಗೆ ಜವಾಬ್ದಾರನಾಗಿರತಕ್ಕದ್ದು.

(3) ನಿರ್ದೇಶಕನು ವಾರ್ಷಿಕ ವರದಿಗಳನ್ನು ಮತ್ತು ಲೆಕ್ಕಪತ್ರಗಳನ್ನು ಮಂಡಳಿಗೆ ಸಲ್ಲಿಸತಕ್ಕದ್ದು.

(4) ನಿರ್ದೇಶಕನು, ಈ ಅಧಿನಿಯಮದ ಅಥವಾ ಶಾಸನಗಳ ಅಥವಾ ಅಧ್ಯಾದೇಶಗಳ ಮೂಲಕ ತನಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**17. ಡೀನ್.**– (1) ಶಾಸನಗಳ ಮೂಲಕ ವಿಧಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಸಂಸ್ಥೆಯ ಡೀನ್‌ನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ಈ ಅಧಿನಿಯಮದ ಅಥವಾ ಶಾಸನಗಳ ಮೇರೆಗೆ ಅಥವಾ ನಿರ್ದೇಶಕನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ಡೀನನು ನಿರ್ದೇಶಕನಿಗೆ ವರದಿ ಮಾಡಿಕೊಳ್ಳತಕ್ಕದ್ದು.

**18. ರಿಜಿಸ್ಟ್ರಾರ್.**– (1) ಶಾಸನಗಳ ಮೂಲಕ ವಿಧಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಸಂಸ್ಥೆಯ ರಿಜಿಸ್ಟ್ರಾರನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ಸಂಸ್ಥೆಯ ದಾಖಲೆಗಳ, ಸಾಮಾನ್ಯ ಮೊಹರುಗಳ, ನಿಧಿಗಳ ಮತ್ತು ಮಂಡಳಿಯು ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕನಾಗಿರತಕ್ಕದ್ದು.

(2) ರಿಜಿಸ್ಟ್ರಾರನು ಮಂಡಳಿಯ, ಸೆನೆಟಿನ ಮತ್ತು ಶಾಸನಗಳ ಮೂಲಕ ನಿಯಮಿಸಬಹುದಾದಂಥ ಸಮಿತಿಗಳ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(3) ರಿಜಿಸ್ಟ್ರಾರನು, ತನ್ನ ಪ್ರಕಾರ್ಯಗಳ ಸಮರ್ಪಕ ನಿರ್ವಹಣೆಗಾಗಿ ನಿರ್ದೇಶಕನಿಗೆ ಜವಾಬ್ದಾರನಾಗಿರತಕ್ಕದ್ದು.

(4) ರಿಜಿಸ್ಟ್ರಾರನು, ಈ ಅಧಿನಿಯಮದ ಅಥವಾ ಶಾಸನಗಳ ಮೇರೆಗಿನ ಅಥವಾ ನಿರ್ದೇಶಕನು ಅವನಿಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**19. ಇತರ ಪ್ರಾಧಿಕಾರಗಳ ಮತ್ತು ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.**– ಈ ಹಿಂದೆ ನಮೂದಿಸಲಾದವುಗಳನ್ನು ಹೊರತುಪಡಿಸಿ, ಪ್ರಾಧಿಕಾರಗಳ ಮತ್ತು ಅಧಿಕಾರಿಗಳ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಶಾಸನಗಳ ಮೂಲಕ ನಿರ್ಧರಿಸತಕ್ಕದ್ದು.

**20. ಕೇಂದ್ರ ಸರ್ಕಾರದಿಂದ ಅನುದಾನಗಳು.**– ಈ ಅಧಿನಿಯಮದ ಮೇರೆಗೆ ಸಂಸ್ಥೆಯು ತನ್ನ ಪ್ರಕಾರ್ಯಗಳನ್ನು ದಕ್ಷವಾಗಿ ನಿರ್ವಹಿಸಲು ಅದನ್ನು ಸಮರ್ಥಗೊಳಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಮಾಡಿದ ಸೂಕ್ತ ಧನವಿನಿಯೋಗದ ತರುವಾಯ, ತಾನು ಸೂಕ್ತವೆಂದು ಆಲೋಚಿಸಬಹುದಾದಷ್ಟು ಹಣದ ಮೊತ್ತವನ್ನು ಮತ್ತು ಅಂಥ ರೀತಿಯಲ್ಲಿ ಪ್ರತಿ ಆರ್ಥಿಕ ವರ್ಷದಲ್ಲಿ ಸಂಸ್ಥೆಗೆ ಸಂದಾಯ ಮಾಡಬಹುದು.

**21. ಸಂಸ್ಥೆಯ ನಿಧಿ.**– (1) ಸಂಸ್ಥೆಯು ಒಂದು ನಿಧಿಯನ್ನು ನಿರ್ವಹಿಸಿಕೊಂಡು ಬರತಕ್ಕದ್ದು ಮತ್ತು ಆ ನಿಧಿಗೆ, –

(ಎ) ಕೇಂದ್ರ ಸರ್ಕಾರವು ಒದಗಿಸಿದ ಎಲ್ಲಾ ಹಣವನ್ನು;

(ಬಿ) ಎಲ್ಲಾ ಫೀಜುಗಳನ್ನು ಮತ್ತು ಇತರ ಚಾರ್ಜುಗಳನ್ನು;

(ಸಿ) ಅನುದಾನಗಳ, ಕಾಣಿಕೆಗಳ, ದೇಣಿಗೆಗಳ, ಸತ್ಕಾರ್ಯ ಧನಗಳ, ಮರಣ ಶಾಸನ ದಾನಗಳ ಅಥವಾ ವರ್ಗಾವಣೆಗಳ ರೂಪದಲ್ಲಿ ಸಂಸ್ಥೆಯು ಸ್ವೀಕರಿಸಿದ ಎಲ್ಲಾ ಹಣವನ್ನು; ಮತ್ತು

(ಡಿ) ಇತರೆ ಯಾವುದೇ ರೀತಿಯಲ್ಲಿ ಅಥವಾ ಯಾವುದೇ ಇತರ ಮೂಲದಿಂದ ಸಂಸ್ಥೆಯು ಸ್ವೀಕರಿಸಿದ ಎಲ್ಲಾ ಹಣವನ್ನು

– ಜಮೆ ಮಾಡತಕ್ಕದ್ದು.

(2) ನಿಧಿಗೆ ಜಮೆಯಾದ ಎಲ್ಲಾ ಹಣವನ್ನು ಸಂಸ್ಥೆಯು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ತಾನು ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಅಂಥ ಬ್ಯಾಂಕ್‌ಗಳಲ್ಲಿ ಠೇವಣಿ ಇಡತಕ್ಕದ್ದು ಅಥವಾ ಅಂಥ ರೀತಿಯಲ್ಲಿ ಹಣ ಹೂಡಿಕೆ ಮಾಡತಕ್ಕದ್ದು;

(3) ಈ ಅಧಿನಿಯಮದ ಮೇರೆಗೆ ಸಂಸ್ಥೆಯ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಅದರ ಕರ್ತವ್ಯಗಳ ನಿರ್ವಹಣೆಯಲ್ಲಿ ಮಾಡಲಾದ ವೆಚ್ಚವೂ ಸೇರಿದಂತೆ ಸಂಸ್ಥೆಯ ವೆಚ್ಚಗಳನ್ನು ಭರಿಸುವುದ್ಕಾಗಿ ಈ ನಿಧಿಯನ್ನು ಉಪಯೋಗಿಸತಕ್ಕದ್ದು.

**22. ದತ್ತಿ ನಿಧಿಯನ್ನು ಸ್ಥಾಪಿಸುವುದು.–** 21ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು,–

(ಎ) ನಿರ್ದಿಷ್ಟಪಡಿಸಲಾದ ಉದ್ದೇಶಕ್ಕಾಗಿ ದತ್ತಿ ನಿಧಿಯನ್ನು ಮತ್ತು ಯಾವುದೇ ಇತರ ನಿಧಿಯನ್ನು ಸ್ಥಾಪಿಸುವಂತೆ;

(ಬಿ) ಅದರ ನಿಧಿಯಿಂದ ದತ್ತಿ ನಿಧಿಗೆ ಅಥವಾ ಯಾವುದೇ ಇತರ ನಿಧಿಗೆ ಹಣವನ್ನು ವರ್ಗಾವಣೆ ಮಾಡುವಂತೆ

– ಸಂಸ್ಥೆಗೆ ನಿರ್ದೇಶನ ನೀಡಬಹುದು.

**23. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ ನೀಡಬಹುದಾದಂಥ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ, ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಸಂಸ್ಥೆಯು ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಜಮಾಖರ್ಚು ಪಟ್ಟಿಯೂ ಸೇರಿದಂತೆ, ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ತಯಾರಿಸತಕ್ಕದ್ದು.

(2) ಸಂಸ್ಥೆಯ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ, ಆತನು ಭರಿಸಿದ ಯಾವುದೇ ವೆಚ್ಚವನ್ನು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ಸಂಸ್ಥೆಯು ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ಸಂಸ್ಥೆಯ ಲೆಕ್ಕಪತ್ರಗಳನ್ನು ಪರಿಶೋಧಿಸುವ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಹೊಂದಿರುವಂಥವೇ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಸಂಸ್ಥೆಯ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ಓಚರುಗಳನ್ನು, ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಹಾಗೂ ಸಂಸ್ಥೆಯ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕನು ಮತ್ತು ಮಹಾ ಲೆಕ್ಕಪರಿಶೋಧಕನು ಅಥವಾ ಈ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು, ಪ್ರಮಾಣೀಕರಿಸಿದಂಥ ಸಂಸ್ಥೆಯ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನೆಯ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**24. ನಿವೃತ್ತಿ ವೇತನ ಮತ್ತು ಭವಿಷ್ಯ ನಿಧಿ.–** (1) ಸಂಸ್ಥೆಯು, ನಿರ್ದೇಶಕನನ್ನು ಒಳಗೊಂಡಂತೆ, ಅದರ ನೌಕರರ ಪ್ರಯೋಜನಕ್ಕಾಗಿ, ಶಾಸನಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಅದು ಸೂಕ್ತವೆಂದು ಭಾವಿಸುವಂಥ ನಿವೃತ್ತಿ ವೇತನ ನಿಧಿಯನ್ನು, ವಿಮಾ ನಿಧಿಯನ್ನು ಮತ್ತು ಭವಿಷ್ಯ ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಯಾವುದೇ ಅಂಥ ಭವಿಷ್ಯ ನಿಧಿಯನ್ನು ಹಾಗೆ ಸ್ಥಾಪಿಸಿರುವಲ್ಲಿ, ಆ ನಿಧಿಗೆ ಕೇಂದ್ರ ಸರ್ಕಾರವು, ಭವಿಷ್ಯ ನಿಧಿ ಅಧಿನಿಯಮ, 1925 (1925ರ ಅಧಿನಿಯಮ ಸಂಖ್ಯೆ 19)ರ ಉಪಬಂಧಗಳು ಅಂಥ ಭವಿಷ್ಯ ನಿಧಿಯು ಸರ್ಕಾರಿ ಭವಿಷ್ಯ ನಿಧಿಯಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು.

**25. ನೇಮಕಾತಿಗಳು.–** ಸಂಸ್ಥೆಯ ನಿರ್ದೇಶಕನನ್ನು ಹೊರತುಪಡಿಸಿ, ಸಿಬ್ಬಂದಿಯ ಎಲ್ಲಾ ನೇಮಕಾತಿಗಳನ್ನು,–

(ಎ) ಸಹಾಯಕ ಪ್ರಾಧ್ಯಾಪಕ ಅಥವಾ ಅದಕ್ಕಿಂತ ಮೇಲಿನ ಹುದ್ದೆಯ ಶೈಕ್ಷಣಿಕ ಸಿಬ್ಬಂದಿಯನ್ನು ನೇಮಕ ಮಾಡುವುದಿದ್ದರೆ ಅಥವಾ ಸಹಾಯಕ ಪ್ರಾಧ್ಯಾಪಕನ ಕೇಡರಿಗೆ ಸಮನಾದ ಅಥವಾ ಹೆಚ್ಚಿನ ಗರಿಷ್ಠ ವೇತನ ಶ್ರೇಣಿಯ, ಯಾವುದೇ ಕೇಡರಿನಲ್ಲಿನ ಶೈಕ್ಷಣಿಕೇತರ ಸಿಬ್ಬಂದಿಯ ನೇಮಕ ಮಾಡುವುದಿದ್ದರೆ, ಮಂಡಳಿಯು ಮತ್ತು;

(ಬಿ) ಯಾವುದೇ ಇತರ ಸಂದರ್ಭದಲ್ಲಿ, ನಿರ್ದೇಶಕನು

– ಶಾಸನಗಳಲ್ಲಿ ಹೇಳಲಾದ ಪ್ರಕ್ರಿಯೆಗನುಸಾರವಾಗಿ ಮಾಡತಕ್ಕದ್ದು.

**26. ಶಾಸನಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಶಾಸನಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ: –

(ಎ) ಬೋಧನಾ ವಿಭಾಗಗಳ ರಚನೆ;

(ಬಿ) ಫೆಲೋಶಿಪ್, ಸ್ಕಾಲರ್‌ಶಿಪ್, ವಿದ್ಯಾರ್ಥಿ ಸಹಾಯ ವೇತನಗಳ, ಪದಕಗಳ ಮತ್ತು ಪಾರಿತೋಷಕಗಳ ಸ್ಥಾಪನೆ;

(ಸಿ) ಸಂಸ್ಥೆಯ ಅಧಿಕಾರಿಗಳ, ಬೋಧಕರ ಮತ್ತು ಇತರ ಸಿಬ್ಬಂದಿಯ ವರ್ಗೀಕರಣ, ನೇಮಕದ ವಿಧಾನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ನಿರ್ಧಾರ;

(ಡಿ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪ್ರವರ್ಗಗಳ ವ್ಯಕ್ತಿಗಳಿಗಾಗಿ ಹುದ್ದೆಗಳ ಮೀಸಲಾತಿ;

(ಇ) ಸಂಸ್ಥೆಯ ಅಧಿಕಾರಿಗಳ, ಬೋಧಕರ ಮತ್ತು ಇತರ ಸಿಬ್ಬಂದಿಯ ಪ್ರಯೋಜನಕ್ಕಾಗಿ ನಿವೃತ್ತಿ ವೇತನ ನಿಧಿ, ವಿಮಾ ನಿಧಿ ಮತ್ತು ಭವಿಷ್ಯ ನಿಧಿಯ ಸ್ಥಾಪನೆ;

(ಎಫ್) ಸಂಸ್ಥೆಯ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಕರ್ತವ್ಯಗಳು;

(ಜಿ) ಹಾಲ್‌ಗಳ ಮತ್ತು ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮತ್ತು ನಿರ್ವಹಣೆ;

(ಹೆಚ್) ಮಂಡಳಿಯ ಸದಸ್ಯರಲ್ಲಿ ಉಂಟಾಗುವ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಐ) ಮಂಡಳಿಯ ಆದೇಶಗಳು ಮತ್ತು ತೀರ್ಮಾನಗಳ ಅಧಿಪ್ರಮಾಣನ;

(ಜೆ) ಸೆನೆಟ್ ಸಭೆಗಳು, ಅಂಥ ಸಭೆಗಳಲ್ಲಿ ಕೋರಂ ಮತ್ತು ಅವುಗಳ ಕಾರ್ಯಕಲಾಪಗಳನ್ನು ನಡೆಸಲು ಅನುಸರಿಸಬೇಕಾದ ಕಾರ್ಯವಿಧಾನ;

(ಕೆ) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**27. ಶಾಸನಗಳನ್ನು ಹೇಗೆ ರಚಿಸುವುದು.–** (1) ಸಂಸ್ಥೆಯ ಮೊದಲ ಶಾಸನಗಳನ್ನು ಮಂಡಳಿಯು ಕುಲಾಧ್ಯಕ್ಷನ ಪೂರ್ವ ಅನುಮೋದನೆಯೊಂದಿಗೆ ರಚಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

(2) ಮಂಡಳಿಯು, ಕಾಲಕಾಲಕ್ಕೆ ಹೊಸ ಅಥವಾ ಹೆಚ್ಚುವರಿ ಶಾಸನಗಳನ್ನು ರಚಿಸಬಹುದು ಅಥವಾ ಇನ್ನು ಮುಂದೆ ಈ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಶಾಸನಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(3) ಹೊಸ ಶಾಸನ ಅಥವಾ ಶಾಸನಗಳಿಗೆ ಸೇರ್ಪಡೆ ಮಾಡುವುದಕ್ಕೆ ಅಥವಾ ಶಾಸನದ ಯಾವುದೇ ತಿದ್ದುಪಡಿಗೆ ಅಥವಾ ನಿರಸನಕ್ಕೆ ಕುಲಾಧ್ಯಕ್ಷನ ಪೂರ್ವಾನುಮೋದನೆ ಅಗತ್ಯವಾಗಿರತಕ್ಕದ್ದು, ಅವನು ಅದಕ್ಕೆ ಅನುಮತಿ ನೀಡಬಹುದು ಅಥವಾ ಅನುಮತಿಯನ್ನು ತಡೆಹಿಡಿಯಬಹುದು ಅಥವಾ ಪರ್ಯಾಲೋಚನೆಗಾಗಿ ಅದನ್ನು ಮಂಡಳಿಗೆ ಕಳುಹಿಸಬಹುದು.

(4) ಹೊಸ ಶಾಸನವು ಅಥವಾ ಅಸ್ತಿತ್ವದಲ್ಲಿರುವ ಶಾಸನವನ್ನು ತಿದ್ದುಪಡಿ ಮಾಡುವ ಅಥವಾ ನಿರಸನಗೊಳಿಸುವ ಶಾಸನವು, ಅದಕ್ಕೆ ಕುಲಾಧ್ಯಕ್ಷನು ಅನುಮತಿಸಿದ್ದ ಹೊರತು ಅದು ಸಿಂಧುವಾಗತಕ್ಕದ್ದಲ್ಲ.

**28. ಅಧ್ಯಾದೇಶಗಳು.–** ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೊಳಪಟ್ಟು, ಸಂಸ್ಥೆಯ ಅಧ್ಯಾದೇಶಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಸಂಸ್ಥೆಗೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಅನುಸೂಚಿತ ಜಾತಿಗಳಿಗಾಗಿ, ಅನುಸೂಚಿತ ಬುಡಕಟ್ಟುಗಳಿಗಾಗಿ ಮತ್ತು ವ್ಯಕ್ತಿಗಳ ಇತರ ಪ್ರವರ್ಗಗಳಿಗಾಗಿ ಮೀಸಲಾತಿ;

(ಸಿ) ಸಂಸ್ಥೆಯ ಎಲ್ಲಾ ಪದವಿಗಳಿಗಾಗಿ ಗೊತ್ತುಪಡಿಸಬೇಕಾದ ವ್ಯಾಸಂಗ ಕ್ರಮಗಳು;

(ಡಿ) ವಿದ್ಯಾರ್ಥಿಗಳು ಯಾವ ಷರತ್ತುಗಳ ಮೇರೆಗೆ ಸಂಸ್ಥೆಯ ಪದವಿ ವ್ಯಾಸಂಗ ಕ್ರಮಗಳಿಗೆ ಮತ್ತು ಪರೀಕ್ಷೆಗಳಿಗೆ ಪ್ರವೇಶ ಪಡೆಯಬೇಕಾಗುತ್ತದೆಯೋ ಮತ್ತು ಪದವಿಗಳಿಗೆ ಅರ್ಹರಾಗಬೇಕಾಗುತ್ತದೆಯೋ ಆ ಷರತ್ತುಗಳು;

(ಇ) ಫೆಲೋಶಿಪ್‌ಗಳು, ಸ್ಕಾಲರ್‌ಶಿಪ್‌ಗಳು, ವಿದ್ಯಾರ್ಥಿ ಸಹಾಯ ವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಕೊಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(ಎಫ್) ಪರೀಕ್ಷಾ ನಿಕಾಯಗಳ, ಪರೀಕ್ಷಕರುಗಳ ಮತ್ತು ಮಾಡರೇಟರುಗಳ ನೇಮಕದ ಷರತ್ತುಗಳು ಮತ್ತು ವಿಧಾನ ಮತ್ತು ಅವರ ಕರ್ತವ್ಯಗಳು;

(ಜಿ) ಪರೀಕ್ಷೆಗಳನ್ನು ನಡೆಸುವುದು;

(ಹೆಚ್) ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡಿಕೊಂಡು ಬರುವುದು;

(ಐ) ಸಂಸ್ಥೆಯಲ್ಲಿನ ವ್ಯಾಸಂಗ ಪಠ್ಯ ವಿಷಯಗಳಿಗೆ ಮತ್ತು ಸಂಸ್ಥೆಯ ಪದವಿ ಪರೀಕ್ಷೆಗಳ ಪ್ರವೇಶಕ್ಕೆ ವಿಧಿಸಬೇಕಾದ ಫೀಜುಗಳು;

(ಜೆ) ಸಂಸ್ಥೆಯ ವಿದ್ಯಾರ್ಥಿಗಳ ನಿವಾಸದ ಷರತ್ತುಗಳು ಮತ್ತು ಹಾಲ್‌ಗಳಲ್ಲಿ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿನ ವಾಸಕ್ಕಾಗಿ ಫೀಜುಗಳು ಮತ್ತು ಇತರ ಚಾರ್ಜುಗಳನ್ನು ವಿಧಿಸುವುದು; ಮತ್ತು

(ಕೆ) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ, ಅಧ್ಯಾದೇಶಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಎಲ್ಲಾ ವಿಷಯಗಳು.

**29. ಅಧ್ಯಾದೇಶಗಳನ್ನು ಹೇಗೆ ರಚಿಸುವುದು.–** (1) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು ಸೆನೆಟ್ ಅಧ್ಯಾದೇಶಗಳನ್ನು ರಚಿಸತಕ್ಕದ್ದು.

(2) ಸೆನೆಟ್ ರಚಿಸಿದ ಎಲ್ಲಾ ಅಧ್ಯಾದೇಶಗಳು ಅದು ನಿರ್ದೇಶಿಸಬಹುದಾದಂಥ ದಿನಾಂಕದಿಂದ ಜಾರಿಯಾಗತಕ್ಕದ್ದು, ಆದರೆ, ಹಾಗೆ ರಚಿಸಿದ ಪ್ರತಿಯೊಂದು ಅಧ್ಯಾದೇಶವನ್ನು ಆದಷ್ಟು ಬೇಗನೆ, ಮಂಡಲಿಗೆ ಸಲ್ಲಿಸತಕ್ಕದ್ದು ಮತ್ತು ಅದು ತನ್ನ ಮುಂದಿನ ಸಭೆಯಲ್ಲಿ ಅದನ್ನು ಪರಿಗಣಿಸತಕ್ಕದ್ದು.

(3) ಮಂಡಳಿಯು, ಯಾವುದೇ ಅಂಥ ಅಧ್ಯಾದೇಶವನ್ನು ನಿರ್ಣಯದ ಮೂಲಕ ತಿದ್ದುಪಡಿ ಮಾಡುವುದಕ್ಕೆ ಅಥವಾ ರದ್ದು ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಅಧ್ಯಾದೇಶಗಳು ತದನುಸಾರವಾಗಿ, ಅಂಥ ನಿರ್ಣಯದ ದಿನಾಂಕದಿಂದ ಸಂದರ್ಭಾನುಸಾರ ಮಾರ್ಪಾಟಾಗತಕ್ಕದ್ದು ಅಥವಾ ರದ್ದಾಗತಕ್ಕದ್ದು.

**30. ಮಧ್ಯಸ್ಥಿಕೆ ನ್ಯಾಯಾಧಿಕರಣ.–** (1) ಸಂಸ್ಥೆಯ ಮತ್ತು ಅದರ ಯಾರೇ ನೌಕರನ ನಡುವಣ ಕರಾರಿನಿಂದ ಉದ್ಭವಿಸುವ ಯಾವುದೇ ವಿವಾದವನ್ನು, ಸಂಬಂಧಪಟ್ಟ ನೌಕರನ ಕೋರಿಕೆ ಮೇರೆಗೆ ಅಥವಾ ಸಂಸ್ಥೆಯ ಸೂಚನೆಯ ಮೇರೆಗೆ ಸಂಸ್ಥೆಯು ನೇಮಕ ಮಾಡಿದ ಒಬ್ಬ ಸದಸ್ಯನನ್ನು, ನೌಕರನು ನಾಮನಿರ್ದೇಶಿಸಿದ ಒಬ್ಬ ಸದಸ್ಯನನ್ನು ಮತ್ತು ಕುಲಾಧ್ಯಕ್ಷನು ನೇಮಕ ಮಾಡಿದ ಒಬ್ಬ ಮಧ್ಯಸ್ಥಗಾರನನ್ನು ಒಳಗೊಂಡಿರುವ ಮಧ್ಯಸ್ಥಿಕೆ ನ್ಯಾಯಾಧಿಕರಣಕ್ಕೆ ವಹಿಸತಕ್ಕದ್ದು.

(2) ಮಧ್ಯಸ್ಥಿಕೆ ನ್ಯಾಯಾಧಿಕರಣದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) (1)ನೇ ಉಪಪ್ರಕರಣವು ಅಗತ್ಯಪಡಿಸಿರುವಂತೆ ಮಧ್ಯಸ್ಥಿಕೆ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬೇಕಾದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(4) ಮಧ್ಯಸ್ಥಿಕೆ ನ್ಯಾಯಾಧಿಕರಣವು ತನ್ನ ಸ್ವಂತ ಕಾರ್ಯವಿಧಾನವನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು.

(5) ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿರುವ ಯಾವುದೂ, ಈ ಪ್ರಕರಣದ ಮೇರೆಗಿನ ಮಧ್ಯಸ್ಥಿಕೆಗಳಿಗೆ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ – III

## ಸಂಕೀರ್ಣ

**31. ಖಾಲಿ ಸ್ಥಾನಗಳಿಂದಾಗಿ ಕಾರ್ಯಗಳು ಮತ್ತು ವ್ಯವಹರಣೆಗಳು ಅಸಿಂಧುಗೊಳ್ಳುವುದಿಲ್ಲ.–** ಈ ಅಧಿನಿಯಮದ ಅಥವಾ ಶಾಸನಗಳ ಮೇರೆಗೆ ಸ್ಥಾಪಿತವಾದ ಸಂಸ್ಥೆಯ ಅಥವಾ ಮಂಡಳಿಯ ಅಥವಾ ಸೆನೆಟ್‌ನ ಅಥವಾ ಯಾವುದೇ ಇತರ ನಿಕಾಯದ ಕಾರ್ಯವು,–

(ಎ) ಅದರಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ;

(ಬಿ) ಅದರ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಆಯ್ಕೆ, ನಾಮನಿರ್ದೇಶನ ಅಥವಾ ನೇಮಕದಲ್ಲಿನ ಯಾವುದೇ ನ್ಯೂನ್ಯತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಅದರ ಕಾರ್ಯವಿಧಾನದಲ್ಲಿ ಯಾವುದೇ ಕ್ರಮಬದ್ಧತೆಯಿಲ್ಲದಿರುವ

– ಕಾರಣ ಮಾತ್ರದಿಂದಲೇ ಅಸಿಂಧುಗೊಳ್ಳತಕ್ಕದ್ದಲ್ಲ.

**32. ಸಂಸ್ಥೆಯ ಮೂಲಕ ಪದವಿ, ಮುಂತಾದವುಗಳನ್ನು ನೀಡುವುದು.–** ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಧಿನಿಯಮ, 1956 (1956ರ 3)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಂಸ್ಥೆಯು ಈ ಅಧಿನಿಯಮದ ಮೇರೆಗೆ ಪದವಿಗಳನ್ನು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಮತ್ತು ಬಿರುದುಗಳನ್ನು ಪ್ರದಾನ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು.

**33. ಪ್ರಾಯೋಜಿತ ಯೋಜನೆಗಳು.–** ಯಾವುದೇ ಸರ್ಕಾರದಿಂದ, ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಅಥವಾ ಸಂಸ್ಥೆಯು ಕಾರ್ಯಗತಗೊಳಿಸಬೇಕಾದ ಯೋಜನೆಯನ್ನು ಪ್ರಾಯೋಜಿಸುವ ಯಾವುದೇ ಇತರ ಏಜನ್ಸಿಯಿಂದ ಸಂಸ್ಥೆಯು ನಿಧಿಗಳನ್ನು ಸ್ವೀಕರಿಸುವಾಗಲೆಲ್ಲಾ, ಈ ಅಧಿನಿಯಮದಲ್ಲಿ ಏನೇ ಇದ್ದರೂ,–

(ಎ) ಸಂಸ್ಥೆಯು ಸ್ವೀಕರಿಸಿದ ಮೊಬಲಗನ್ನು ಸಂಸ್ಥೆಯ ನಿಧಿಗಳಿಂದ ಪ್ರತ್ಯೇಕವಾಗಿ ಇಡತಕ್ಕದ್ದು ಮತ್ತು ಯೋಜನೆಯ ಉದ್ದೇಶಗಳಿಗಾಗಿ ಮಾತ್ರವೇ ಉಪಯೋಗಿಸತಕ್ಕದ್ದು;

(ಬಿ) ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಾದ ಸಿಬ್ಬಂದಿಯನ್ನು ಪ್ರಾಯೋಜಿತ ಸಂಸ್ಥೆಯು ವಿಧಿಸಿದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ನೇಮಕ ಮಾಡತಕ್ಕದ್ದು:

ಪರಂತು, (ಎ) ಖಂಡದ ಮೇರೆಗೆ ಉಪಯೋಗಿಸದೆ ಉಳಿದ ಯಾವುದೇ ಹಣವನ್ನು ಈ ಅಧಿನಿಯಮದ 22ನೇ ಪ್ರಕರಣದ ಮೇರೆಗೆ ರಚಿಸಲಾದ ದತ್ತಿ ನಿಧಿಗೆ ವರ್ಗಾವಣೆ ಮಾಡತಕ್ಕದ್ದು.

**34. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸಲು ಅದಕ್ಕೆ ಅವಶ್ಯಕ ಅಥವಾ ವಿಹಿತವೆಂದು ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು:

ಪರಂತು, ಗೊತ್ತುಪಡಿಸಿದ ದಿನದಿಂದ ಎರಡು ವರ್ಷಗಳು ಮುಗಿದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**35. ಮಧ್ಯಕಾಲೀನ ಉಪಬಂಧಗಳು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಈ ಅಧಿನಿಯಮದ ನಿಕಟಪೂರ್ವದಲ್ಲಿ ಸಂಘದ ಆಡಳಿತ ಮಂಡಳಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಮಂಡಳಿಯು ಈ ಅಧಿನಿಯಮದ ಮೇರೆಗೆ ಸಂಸ್ಥೆಗಾಗಿ ಹೊಸ ಮಂಡಳಿಯ ರಚನೆಯಾಗುವವರೆಗೆ ಕಾರ್ಯವನ್ನು ಹಾಗೆಯೇ ನಿರ್ವಹಿಸುವುದು ಮುಂದುವರಿಯತಕ್ಕದ್ದು. ಆದರೆ, ಈ ಅಧಿನಿಯಮದ ಮೇರೆಗೆ ಹೊಸ ಮಂಡಳಿಯನ್ನು ರಚಿಸಿದ ನಂತರ, ಅಂಥ ರಚನೆಗೆ ಮೊದಲು ಹುದ್ದೆಯನ್ನು ಹೊಂದಿರುವ ಮಂಡಳಿಯ ಸದಸ್ಯರು ಹುದ್ದೆಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು;

(ಬಿ) ಈ ಅಧಿನಿಯಮದ ಮೇರೆಗಿನ ಪ್ರಥಮ ಶಾಸನಗಳನ್ನು ಅಥವಾ ಅಧ್ಯಾದೇಶಗಳನ್ನು ರಚಿಸುವವರೆಗೆ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ವಿಭಾಗ – 67, ಎಸ್.ಎ.ಎಸ್. ನಗರ (ಮೊಹಾಲಿ), ಜಿಲ್ಲೆ ರೋಪಾರ್, ಪಂಜಾಬ್ – ಇದರ ಶಾಸನಗಳು ಮತ್ತು ಅಧ್ಯಾದೇಶಗಳು ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವಂತೆ, ಅವುಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ ಸಂಸ್ಥೆಗೆ ಅನ್ವಯವಾಗುವುದು ಮುಂದುವರಿಯತಕ್ಕದ್ದು.

**36. ಶಾಸನಗಳನ್ನು ಮತ್ತು ಅಧ್ಯಾದೇಶಗಳನ್ನು ರಾಜಪತ್ರದಲ್ಲಿ ಪ್ರಕಟಿಸುವುದು ಮತ್ತು ಸಂಸತ್ತಿನ ಮುಂದೆ ಇಡುವುದು.–** (1) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ಶಾಸನವನ್ನು ಅಥವಾ ಅಧ್ಯಾದೇಶವನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ಶಾಸನವನ್ನು ಅಥವಾ ಅಧ್ಯಾದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ಶಾಸನದಲ್ಲಿ ಅಥವಾ ಅಧ್ಯಾದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಶಾಸನವನ್ನು ಅಥವಾ ಅಧ್ಯಾದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಶಾಸನವು ಅಥವಾ ಅಧ್ಯಾದೇಶವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಶಾಸನದ ಅಥವಾ ಅಧ್ಯಾದೇಶದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(3) ಶಾಸನಗಳನ್ನು ಅಥವಾ ಅಧ್ಯಾದೇಶಗಳನ್ನು ರಚಿಸುವ ಅಧಿಕಾರವು ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದ್ದಲ್ಲದ ದಿನಾಂಕದಿಂದ ಶಾಸನಕ್ಕೆ ಅಥವಾ ಅಧ್ಯಾದೇಶಗಳಿಗೆ ಅಥವಾ ಅವುಗಳ ಪೈಕಿ ಯಾವುದಕ್ಕಾದರೂ

ಪೂರ್ವಾನ್ವಯವಾಗಿ ಜಾರಿಗೊಳಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು. ಆದರೆ, ಅಂಥ ಶಾಸನವು ಅಥವಾ ಅಧ್ಯಾದೇಶವು ಯಾರಿಗೆ ಅನ್ವಯಿಸಬಹುದೋ ಆ ವ್ಯಕ್ತಿಯ ಹಿತಾಸಕ್ತಿಗಳಿಗೆ ಬಾಧಕವನ್ನುಂಟುಮಾಡುವ ಹಾಗೆ ಯಾವುದೇ ಶಾಸನವನ್ನು ಅಥವಾ ಅಧ್ಯಾದೇಶವನ್ನು ಪೂರ್ವಾನ್ವಯವಾಗಿ ಜಾರಿಗೊಳಿಸತಕ್ಕದ್ದಲ್ಲ.

37. **ನಿರಸನ ಮತ್ತು ಉಳಿಸುವಿಕೆ.**– (1) ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಅಧ್ಯಾದೇಶ, 1998ನ್ನು (1998ರ ಅಧ್ಯಾದೇಶ ಸಂಖ್ಯೆ 9) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * * *